ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

ಸಂಖ್ಯೆ. ಗಣಕಶಾಖೆ/ಎಸ್.ಎಸ್.ಎಲ್.ಸಿ/01/2018-19

ದಿನಾಂಕ 28/11/2018

## -ಸುತ್ತೋಲೆ -

ವಿಷಯ : 2018-19 ನೇ ಸಾಲಿಗೆ ಪರೀಕ್ಷಾ ಶುಲ್ಕ ಪಾವತಿಸಿರುವ ಬಗ್ಗೆ ಮಂಡಳಿಗೆ ಮಾಹಿತಿ ಸಲ್ಲಿಸುವ ಬಗ್ಗೆ

ಉಲ್ಲೇಖ : 1) ದಿನಾಂಕ 20/08/2018 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿ

2) ಈ ಕಛೇರಿ ಪತ್ರ ಸಂ. ಗಣಕಶಾಖೆ/ಎಸ್.ಎಸ್.ಎಲ್.ಸಿ/01/2018-19 ದಿನಾಂಕ 27/09/2018 ಹಾಗು ಸಮಸಂಖ್ಯೆಯ ಪತ್ರ ದಿನಾಂಕ 28/11/2018

ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಯಲ್ಲಿನ ಎಪ್ರಿಲ್-2019ರ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳ ವಿವರಗಳನ್ನು ಎಸ್.ಎ.ಟಿ.ಎಸ್ ಜಾಲತಾಣದ ಮೂಲಕ ಸಲ್ಲಿಸುವ ವಿಧಾನದ ಬಗ್ಗೆ ದಿನಾಂಕ 20/08/2018 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗಿದೆ.

ಅದರಂತೆ ಇಲಾಖೆಯಿಂದ ಮಾನ್ಯತೆ ಪಡೆದಿರುವ ಮತ್ತು ನವೀಕರಣಗೊಂಡಿರುವ ಶಾಲೆಗಳ ಮುಖ್ಯಶಿಕ್ಷಕರು ಮಾತ್ರ ಜಾಲತಾಣದಲ್ಲಿ ಮಾಹಿತಿಗಳನ್ನು ಅಪ್ ಲೋಡ್ ಮಾಡಲು ಅವಕಾಶ ನೀಡಲಾಗಿದ್ದು ಒಟ್ಟು 8,40,661 ಅರ್ಜಿಗಳನ್ನು ಅಪ್ ಲೋಡ್ ಮಾಡಲಾಗಿದೆ. ಪ್ರತಿ ಶಾಲೆಯಿಂದ ತುಂಬಬೇಕಾದ ಶುಲ್ಕದ ವಿವರಗಳನ್ನು ಎಸ್.ಎ.ಟಿ.ಎಸ್. ಜಾಲತಾಣದಲ್ಲಿ ಲೆಕ್ಕ ಹಾಕಿ ಫೀ ಸಮ್ಮರಿ ನೀಡಲಾಗಿದೆ. ಇದೇ ಜಾಲತಾಣದಲ್ಲಿ ಬ್ಯಾಂಕ್ ಚಲನ್ ನ್ನು ಡೌನ್ ಲೋಡ್ ಮಾಡಿಕೊಂಡು ಫೀ ತುಂಬಲು ಸೂಚಿಸಲಾಗಿತ್ತು. ಆದರೆ ಕೆಲವು ತಾಂತ್ರಿಕ ಕಾರಣಗಳಿಂದಾಗಿ ಕೆಲವು ಶಾಲೆಗಳ ಫೀ ಚಲನ್ ಗಳು ದೊರಕುತ್ತಿಲ್ಲವೆಂದು ಸಹಾಯವಾಣಿಯ ಮೂಲಕ ತಿಳಿಯಲಾಗಿದೆ.

1) ಚಲನ್ ಡೌನ್ ಲೋಡ್ ಮಾಡಿಕೊಳ್ಳಲಾಗದ ಸರ್ಕಾರಿ ಶಾಲೆಯ ಮುಖ್ಯಸ್ಥರು ಸಾಮಾನ್ಯ ನೆಫ್ಟ್ ಚಲನ್ ನಲ್ಲಿ ಫೀ ಭರಿಸಿ ಪ್ರತಿಯನ್ನು ಮಂಡಳಿಗೆ ಸಲ್ಲಿಸುವುದು.
2) ಮಾನ್ಯತೆ ನವೀಕರಣದ ಸಮಸ್ಯೆಯಿಂದ ಚಲನ್ ಡೌನ್ ಲೋಡ್ ಮಾಡಿಕೊಳ್ಳಲಾಗದ ಅನುದಾನಿತ ಹಾಗು ಅನುದಾನರಹಿತ ಶಾಲೆಗಳ ಮುಖ್ಯಸ್ಥರು ನಿಗಧಿತ ದಾಖಲೆಗಳನ್ನು ಉಪನಿರ್ದೇಶಕರ ಕಛೇರಿಗೆ ಸಲ್ಲಿಸಿ ಅನುಮೋದನೆಯೊಂದಿಗೆ ಮಾನ್ಯತೆ ನವೀಕರಣದ ಪ್ರತಿಗಳನ್ನು ಅಪ್ ಲೋಡ್ ಮಾಡಿ ಚಲನ್ ಡೌನ್ ಲೋಡ್ ಮಾಡಿಕೊಳ್ಳುವುದು.

1/12/18

(ಸುಮಂಗಲ. ವಿ)

ನಿರ್ದೇಶಕರು, ಪರೀಕ್ಷೆಗಳು

ಗೆ,

ರಾಜ್ಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು,

ನಿರ್ದೇಶಕರು (ಪ್ರೌಢ ಶಿಕ್ಷಣ) ಇವರಿಗೆ ಮಾಹಿತಿಗಾಗಿ ಹಾಗು ಮುಂದಿನ ಕ್ರಮಕ್ಕಾಗಿ